# ಗೋವಿಂದಾಷ್ಟಕಮ್ - ೩



**ಕಾಂತಂ ಕಾರಣಕಾರಣಮಾದಿಮನಾದಿಂ ಕಾಲ ಘನಾಭಾಸಂ ।**
**ಕಾಲಿಂದೀಗತಕಾಲಿಯಶಿರಸಿ ನೃತ್ಯಂತಂ ಸುವಿನೃತ್ಯಂತಮ್ ॥**
**ಕಾಲಂ ಕಾಲಕಲಾತೀತಂ ಕಲಿತಾಶೇಷಂ ಕಲಿದೋಷಘ್ನಂ ।**
**ಕಾಲತ್ರಯಗತಿಹೇತುಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೭ ॥**

ಅತ್ಯಂತ ಸುಂದರನಾದ, ಎಲ್ಲಾ ಕಾರಣಗಳಿಗೆ ಆದಿಕಾರಣನಾದ, ಸ್ವತಃ ತಾನು ಅನಾದಿಯಾದರೂ ಕಾಲಸ್ವರೂಪನಾಗಿ ತೋರಿಕೊಳ್ಳುವ, ಯಮುನೆಯಲ್ಲಿ ವಾಸಿಸುತ್ತಿದ್ದ ಕಾಳಿಂಗನ ತಲೆಯ ಮೇಲೆ ಮತ್ತೆ ಮತ್ತೆ ನರ್ತನ ಮಾಡಿದ, ಕಾಲದ ಎಲ್ಲಾ ಕಲೆ(ಅಂಶ) ಗಳನ್ನೂ ಮೀರಿದ, ಎಲ್ಲ ಜ್ಞಾನವನ್ನೂ ಹೊಂದಿದ, ಕಲಿಯ ದೋಷವನ್ನು ನಾಶ ಮಾಡುವ, ಮೂರೂ ಕಾಲತ್ರಯಗಳ ಚಲನೆಗೆ ಕಾರಣನಾದ ಪರಮಾನಂದ ಸ್ವರೂಪಿ ಗೋವಿಂದನನ್ನು ನಮಸ್ಕರಿಸಿರಿ.

**ವೃಂದಾವನ ಭುವಿ ವೃಂದಾರಕಗಣ ವೃಂದಾರಾಧಿತ ವಂದೇಽಹಂ ।**
**ಕುಂದಾಭಾಮಲಮಂದಸ್ಮೇರಸುಧಾನಂದಂ ಸುಹೃದಾನಂದಮ್ ॥**
**ವಂದಾಶೇಷ ಮಹಾಮುನಿಮಾನಸವಂದ್ಯಾನಂದ ಪದದ್ವಂದ್ವಂ ।**
**ವಂದ್ಯಾಶೇಷಗುಣಾಬ್ಧಿಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೮ ॥**

ಬೃಂದಾವನಕ್ಷೇತ್ರದಲ್ಲಿ ದೇವತೆಗಳಿಂದ ಹಾಗೂ ವೃಂದೆ ಎಂಬ ವನದೇವತೆಯಿಂದ ಆರಾಧಿಸಲ್ಪಡುವ ದೇವನನ್ನು ನಮಸ್ಕರಿಸುತ್ತೇನೆ. ಕುಂದಪುಷ್ಪದಂತೆ ನಿರ್ಮಲವಾದ ಮುಗುಳುನಗೆಯಲ್ಲಿ ಆನಂದದ ಅಮೃತವನ್ನು ತುಂಬಿಕೊಂಡಿರುವ, ಮಿತ್ರರಿಗೆ ಆನಂದವನ್ನುಂಟುಮಾಡುವ, ನಮಿಸುತ್ತಿರುವ ಸಮಸ್ತ ಮಹಾಮುನಿಗಳ ಮನದಲ್ಲಿ ನೆಲೆಸಿರುವ ಪಾದದ್ವಂದ್ವವುಳ್ಳ, ನಮಸ್ಕರಿಸಲು ಯೋಗ್ಯವಾದ ಗುಣಗಳ ಸಾಗರನಾದ ಪರಮಾನಂದ ಸ್ವರೂಪಿಯಾದ ಗೋವಿಂದನನ್ನು ನಮಸ್ಕರಿಸಿ.

**ಗೋವಿಂದಾಷ್ಟಕಮೇತದಧೀತೇ ಗೋವಿಂದಾರ್ಪಿತ ಚೇತಾ ಯೋ ।**
**ಗೋವಿಂದಾಚ್ಯುತ ಮಾಧವ ವಿಷ್ಣೋ ಗೋಕುಲನಾಯಕ ಕೃಷ್ಣೇತಿ ॥**
**ಗೋವಿಂದಾಂಘ್ರಿಸರೋಜಧ್ಯಾನಸುಧಾಜಲಧೌತ ಸಮಸ್ತಾಘೋ ।**
**ಗೋವಿಂದಂ ಪರಮಾನಂದಾಮೃತಮಂತಃಸ್ಥಂ ಸ ಸಮಭ್ಯೇತಿ ॥ ೯ ॥**

ಗೋವಿಂದನಲ್ಲಿ ತಮ್ಮ ಮನಸ್ಸನ್ನು ನೆಲೆ ನಿಲ್ಲಿಸಿ, ಗೋವಿಂದ! ಅಚ್ಯುತ! ಮಾಧವ! ವಿಷ್ಣುವೆ! ಗೋಕುಲನಾಯಕ ಕೃಷ್ಣ! ಎಂದು ಜಪಿಸುತ್ತಾ ಗೋವಿಂದನ ಪಾದಾರವಿಂದಗಳ ಧ್ಯಾನವೆಂಬ ಅಮೃತಜಲದಿಂದ ತನ್ನ ಸಮಸ್ತ ಪಾಪಗಳನ್ನೂ ತೊಳೆದುಕೊಂಡು ಯಾರು ಈ ಗೋವಿಂದಾಷ್ಟಕವನ್ನು ಪಾರಾಯಣ ಮಾಡುವನೋ ಅವನು ತನ್ನ ಅಂತರಂಗದೊಳಗೇ ನೆಲೆಸಿರುವ ಪರಮಾನಂದ ರೂಪೀ ಗೋವಿಂದನನ್ನು ಸೇರುವನು.

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ

**ಯಾ**ವ ತಡೆಯೂ ಇಲ್ಲದೆ ಮನಸ್ಸು ಪಾತಾಳ, ಅಂತರಿಕ್ಷ ಎಲ್ಲಿಂದೆಲ್ಲಿಗೆ ಬೇಕಾದರೂ ಸಂಚರಿಸಬಹುದು, ದಶ ದಿಕ್ಕುಗಳಲ್ಲಿ ಹೇಗೆ ಬೇಕಾದರೂ ತಿರುಗಾಡಬಹುದು. ಆದರೆ ಅದರಿಂದ ಸುಖ ಪ್ರಾಪ್ತಿ ಇಲ್ಲ. ಸುಖ ಸಿಗುವುದು ಮನಸ್ಸು ಬ್ರಹ್ಮನ್ನು ಪ್ರವೇಶಿಸಿ ಅಲ್ಲಿ ನೆಲೆಸಿದಾಗ ಮಾತ್ರ.

— ಭರ್ತೃಹರಿ

**ಏ**ನು ನಡೆಯಬಾರದು ಎಂದಿದೆಯೋ ಅದು ನೀನೆಷ್ಟೇ ಪ್ರಯತ್ನಿಸಿದರೂ ನಡೆಯದು. ಏನು ನಡೆಯಲೇಬೇಕು ಎಂದಿದೆಯೋ ಅದನ್ನು ಎಷ್ಟೇ ತಡೆದರೂ ಅದು ನಡೆಯುವುದು. ಇದು ಖಂಡಿತ. ಆದ್ದರಿಂದ ಮೌನವಾಗಿ ಇರುವುದೇ ಅತ್ಯುತ್ತಮ ಕಾರ್ಯ.

— ಶ್ರೀ ರಮಣ ಮಹರ್ಷಿ

**ಜೀ**ವನದಲ್ಲಿ ಅನೇಕ ಬಾರಿ ಸೋಲುಂಟಾಗುವುದು, ಜನರು ಕೊನೆಯ ಗಳಿಗೆಯಲ್ಲಿ ತಾವು ಗೆಲುವಿಗೆ ಎಷ್ಟು ಹತ್ತಿರದಲ್ಲಿ ಇದ್ದೇವೆ ಎಂದು ತಿಳಿಯದೆ, ತಮ್ಮ ಪ್ರಯತ್ನವನ್ನು ಕೈಬಿಡುವುದರಿಂದ.

— ಥಾಮಸ್ ಅಲ್ವಾ ಎಡಿಸನ್

**ಸಾ**ಧಾರಣ ಅಧ್ಯಾಪಕ ಹೇಳಿಕೊಡುತ್ತಾನೆ. ಉತ್ತಮ ಅಧ್ಯಾಪಕ ವಿವರಿಸಿ ಹೇಳುತ್ತಾನೆ. ಅತ್ಯುತ್ತಮ ಅಧ್ಯಾಪಕ ತೋರಿಸಿ ಕೊಡುತ್ತಾನೆ. ಶ್ರೇಷ್ಠ ಅಧ್ಯಾಪಕ ಸ್ಫೂರ್ತಿ ತುಂಬುತ್ತಾನೆ.

— ವಿಲಿಯಂ ಆರ್ಥರ್ ವಾರ್ಡ್